# ಹೊಸ್ಮಾರು: ಎನ್ನೆಸ್ಸೆಸ್ ಶಿಬಿರ ಸಮಾರೋಪ



ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಎಚ್.ಗೋಪಾಲ ಭಂಡಾರಿ ಮಾತನಾಡಿದರು.

**ಕಾರ್ಕಳ:** ಹೊಸ್ಮಾರು ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ಮಂಜುನಾಥ ಪೈ ಸ್ಮಾರಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಸಮಾರೋಪವು ಶನಿವಾರ ನಡೆಯಿತು.

ಮಾಜಿ ಶಾಸಕ ಎಚ್.ಗೋಪಾಲ ಭಂಡಾರಿ ಸಮಾರೋಪ ಭಾಷಣ ಮಾಡಿದರು.

ಕಾಲೇಜಿನ ಪ್ರಾಂಶುಪಾಲ ಶ್ರೀವರ್ಮ ಅಜ್ರಿ ಅಧ್ಯಕ್ಷತೆ ವಹಿಸಿದ್ದರು. ಈದು ಗ್ರಾ.ಪಂ. ಅಧ್ಯಕ್ಷ ಪುರುಶೋತ್ತಮ ರಾವ್, ಉದ್ಯಮಿ ಪ್ರೇಮ್‌ಕುಮಾರ್ ಜೈನ್, ನಾರಾವಿ ಲಯನ್ಸ್ ಕ್ಲಬ್ ಅಧ್ಯಕ್ಷ ವಿಜಯಕುಮಾರ್ ಜೈನ್, ಮುಖ್ಯ ಶಿಕ್ಷಕ ದಿವಾಕರ ಹೆಗ್ಡೆ, ಕರ್ನಾಟಕ ಮಲೆಕುಡಿಯರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀಧರ ಗೌಡ, ಎಪಿಎಂಸಿ ಅಧ್ಯಕ್ಷ ಜಯವರ್ಮ ಜೈನ್ ಮಾಪಾಲು, ಸಮೂಹ ಸಂಪನ್ಮೂಲ ವ್ಯಕ್ತಿ ಕೃಷ್ಣಕುಮಾರ್, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕಿ ಪ್ರಭಾವತಿ, ಗ್ರಂಥಪಾಲಕ ವೆಂಕಟೇಶ್, ಅಧೀಕ್ಷಕ ಪ್ರಭು ಕೆ.ಎಸ್. ಮತ್ತು ಕಾಲೇಜಿನ ಬೋಧಕೇತರ ಸಿಬಂದಿ, ಪ್ರೌಢಶಾಲಾ ಶಿಕ್ಷಕ ವರ್ಗ, ವಿದ್ಯಾರ್ಥಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು.

ಶಿಬಿರಾರ್ಥಿಗಳಾದ ರೋಶನ್ ಶೆಟ್ಟಿ, ಶ್ರೀನಿಧಿ, ಸುರಕ್ಷಾ ಮತ್ತು ಸುಶ್ಮಿತಾ ಶೆಟ್ಟಿ, ಪಾಕ ಪ್ರವೀಣ ಮಧುಸೂದನ ಭಟ್ ಶಿಬಿರದ ಅನುಭವ ಹಂಚಿಕೊಂಡರು. ಯೋಜನಾಧಿಕಾರಿ ಜ್ಯೋತಿ ಶೆಟ್ಟಿ ಸ್ವಾಗತಿಸಿದರು. ಉಪನ್ಯಾಸಕಿ ಜ್ಯೋತಿ ಎಲ್. ಜನ್ನೆ ಬಹುಮಾನ ವಿತರಣೆ ಕಾರ್ಯಕ್ರಮ ನಿರ್ವಹಿಸಿದರು. ಸಹ ಶಿಬಿರಾಧಿಕಾರಿ ಕೃಷ್ಣಮೂರ್ತಿ ವೈದ್ಯ ನಿರೂಪಿಸಿದರು. ಯೋಜನಾಧಿಕಾರಿ ನವೀನ್ ವಂದಿಸಿದರು.